**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಓ ಎಸ್ ನಂಃ 27/2022</u>**

**<u>ಪಿ ಡಬ್ಲ್ಯೂ/1</u>**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 22.04.2025</u>**

**<u>ಮುಂ.ಪಾಟೀ ಸವಾಲುಃ ಶ್ರೀ ಎಮ್ ಎಮ್ ಜಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ</u>**

19. 2 ನೇ ಪ್ರತಿವಾದಿ ಇವರು ದಾಖಲಿಸಿದ ಓ ಎಸ್ ನಂಃ34/2000 ದಾವೆ ಡಿಕ್ರಿಯಾಗಿ ಆ ಬಗ್ಗೆ ಮೇಲ್ಮನವಿ ಸಹ ದಾಖಲಾಗಿದ್ದು, ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಸದರಿ ಮೇಲ್ಮನವಿ ವಜಾ ಆಗಿಲ್ಲ, ಅದರಲ್ಲಿ ನಾವು ಹಾಜರಾಗಿದ್ದು, ಈಗ ಎರಡು ಮುದ್ದತ್ತುಗಳು ಆಗಿವೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ವಜಾ ಆದ ನಂತರ ಈ ನ್ಯಾಯಾಲಯದಲ್ಲಿ ಎಫ್ ಡಿ ಪಿ ನಂಃ7/2015 ರಂತೆ ದಾಖಲಾಗಿ ಆ ಬಗ್ಗೆ ಅಂತಿಮ ಆದೇಶ ದಿಃ07.07.2019 ರಂದು ಆಗಿರುತ್ತದೆ ಎಂದರೆ ಸಾಕ್ಷಿ ಅದು ನನ್ನ ಮಗನಿಗೆ ಗೊತ್ತು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಅಮಲ್ಜಾರಿ ಅರ್ಜಿ ನಂಃ2/2019 ನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ದಾಖಲಿಸಿರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಎಲ್ಲಾ

ಒಳಗೊಂಡು ದಿಃ08.11.2024 ರಂದು ಹಿಸ್ಸಾ ದಿಸ್ಸಾ ಹಾಗೂ ಅವರ ಹಿಸ್ಸಾದ ಆಸ್ತಿಗಳ ಹಸ್ತಾಂತರದ ಬಗ್ಗೆ ಬೆಲೀಫ ಇವರು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

20. ಈ ರೀತಿ ಎಫ್ ಡಿ ಪಿ ಮತ್ತು ಅಮಲ್ಜಾರಿ ಅರ್ಜಿ ಚಾಲ್ತಿಯಲ್ಲಿ ಇದ್ದಾಗ ನಾನು ನನ್ನ ಸಹೋದರರಿಗೆ ಹಾಗೂ ಅವರ ಮಕ್ಕಳಿಗೆ ಹಿಸ್ಸಾ ಪ್ರಕಾರ ಯಾವುದೇ ಆಸ್ತಿ ಸಿಗಬಾರದು ಎಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

21. ಸದರಿ ದಾವೆಯನ್ನು ನೀವು ಏನು ಪರಿಹಾರ ಕೋರಿ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನಾನು ಈ ದಾವೆಯನ್ನು ಹಾಕಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ನನ್ನ ಮಗ ದಾಖಲಿಸಿದ್ದಾನೆ. ನನ್ನ ಮಗನ ಹೆಸರು ಪೀರಪಾಶಾ ಮಹೆಬೂಬಪೀರ ದರ್ಗಾ @ ಪೀರಜಾದೆ ಇರುತ್ತದೆ. ಈ ದಾವೆಯಲ್ಲಿ ನಿಮ್ಮ ಮಗ ಹೇಳಿದ ಪ್ರಕಾರ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಮಾಡಿದ ಪ್ರಾರ್ಥನೆ ಸರಿ ಇಲ್ಲದ ಕಾರಣ ಅದು ವಜಾ ಆಗಲು ಅರ್ಹ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಗೆ ಸಂಬಂದಪಟ್ಟ ಹಾಗೇ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ದಾವಾ ಆಸ್ತಿ ಮಾಲೀಕತ್ವಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಜರು ಮಾಡಿರದ ಕಾರಣ ನನಗೆ ಈ ದಾವೆ ಮೂಲಕ ಪ್ರತಿವಾದಿಗಳ ವಿರುದ್ಧ ತಾಕೀತು ಹುಕ್ಕುಂ ಕೇಳುವ ಅವಕಾಶ ಕಾನೂನುನಡಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂದಪಟ್ಟ ಹಾಗೇ ಈ ಹಿಂದೆ ವಿಭಾಗ ಆದ ಕಾರಣ ಈ ದಾವೆಯೂ ದಾವಾ ಆಸ್ತಿಗೆ ಸಂಬಂದಪಟ್ಟ ಹಾಗೇ ತನ್ನ ಮೂಲಸ್ವರೂಪವನ್ನು ಕಳೆದುಕೊಂಡಿದ್ದರಿಂದ ಅನೂಚಿತವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟ ಹಾಗೇ ಬಹಳಷ್ಟು ಜನರು ಮಾಲೀಕರು ಆಗಿದ್ದರಿಂದ ನನಗೆ ಒಬ್ಬನಿಗೆ ತಾಕೀತ್ತು ಹುಕ್ಕುಂ ಕೇಳುವ ಅವಕಾಶ ಕಾನೂನುನಡಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**